ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE 3/6/2020

## ಅಧ್ಯಕ್ಷರ ವಿರುದ್ಧವೇ ಹಕ್ಕುಚ್ಯುತಿ ಮಂಡಿಸಲು ಮುಂದಾದ ಪಿಎಸಿ

# ಎಚ್ಕೆಪಿಗೆ ಹಕ್ಕುಚ್ಯುತಿ ತಿರುಗುಬಾಣ

■ **ವಿಕ ಸುದ್ದಿಲೋಕ** ಬೆಂಗಳೂರು 3/6/2020

ಆರೋಗ್ಯ ಪರಿಕರ ಖರೀದಿ ಅಕ್ರಮ ವಿಚಾರದಲ್ಲಿ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ವಿರುದ್ಧ ಹಕ್ಕುಚ್ಯುತಿ ಮಂಡಿಸುವ ಉತ್ಸಾಹದಲ್ಲಿದ್ದ ಸಾರ್ವಜನಿಕ ಲೆಕ್ಕಪತ್ರ ಸಮಿತಿ(ಪಿಎಸಿ) ಅಧ್ಯಕ್ಷ ಎಚ್.ಕೆ.ಪಾಟೀಲ್ ವಿರುದ್ಧ ಸಮಿತಿ ಸದಸ್ಯರೇ ಹಕ್ಕುಚ್ಯುತಿ ಮಂಡಿಸಲು ಹೊರಟು ಪಾಟೀಲ್ ಅವರನ್ನು ಸದಸ್ಯರು ತೀವ್ರ ತರಾಟೆಗೆ ತೆಗೆದುಕೊಂಡಿದ್ದಾರೆ ಎನ್ನಲಾಗಿದೆ.

ಎಚ್.ಕೆ.ಪಾಟೀಲ್ ಅಧ್ಯಕ್ಷತೆಯಲ್ಲಿ ಪಿಎಸಿ ಸಭೆ ಮಂಗಳವಾರ ನಡೆಯಿತು. ಪ್ರಾರಂಭದಲ್ಲಿ ಮಾತನಾಡಿದ ಎಚ್.ಕೆ.ಪಾಟೀಲ್, ''ಕೊರೊನಾ ನಿರ್ವಹಣೆಗೆ ಆರೋಗ್ಯ ಇಲಾಖೆಯಿಂದ ಅಗತ್ಯ ಸಾಮಗ್ರಿ ಖರೀದಿ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವ ದೂರು ಬಂದಿದೆ. ಈ ಬಗ್ಗೆ ಪರಿಶೀಲಿಸಲು ಸಭಾಧ್ಯಕ್ಷರು ಅಡ್ಡಗಾಲಾಗಿದ್ದಾರೆ. ಹಾಗಾಗಿ ಅವರ ವಿರುದ್ಧ ಹಕ್ಕುಚ್ಯುತಿ ಮಂಡಿಸಬೇಕಾಗುತ್ತದೆ,'' ಎಂದು ಪ್ರಸ್ತಾಪಿಸಿದರು ಎನ್ನಲಾಗಿದೆ.

ತಿರುಗಿ ಬಿದ್ದ ಸದಸ್ಯರು: ಪಾಟೀಲರು ಹೀಗೆ ಹೇಳುತ್ತಿದ್ದಂತೆ ಸಮಿತಿ ಸದಸ್ಯರಾದ ಬಿಜೆಪಿಯ ಶಾಸಕರು ತಿರುಗಿ ಬಿದ್ದರು. ''ನೀವು ಯಾವ ನಿಯಮದ ಆಧಾರದ ಮೇಲೆ ಸ್ಪೀಕರ್ ವಿರುದ್ಧ ಹಕ್ಕುಚ್ಯುತಿ ಮಂಡಿಸುತ್ತೀರಿ. ಯಾವುದೋ ದೂರನ್ನು ಇಟ್ಟುಕೊಂಡು ಮಾಧ್ಯಮದ ಮುಂದೆ ಈ ಬಗ್ಗೆ ಹೇಳಿಕೆ ನೀಡಿದ್ದೀರಿ. ಇದರ ಬಗ್ಗೆ ಸಮಿತಿ ಸಭೆಯಲ್ಲಿ ಚರ್ಚಿಸಿದ್ದೀರಾ? ಏಕಪಕ್ಷೀಯವಾಗಿ ಯಾವುದೇ ತೀರ್ಮಾನ ಕೈಗೊಳ್ಳುವ ಅಧಿಕಾರ ನಿಮಗಿಲ್ಲ, ಮಾಧ್ಯಮಕ್ಕೆ ಹೇಳಿಕೆ ನೀಡುವ ಮೂಲಕ ರಾಜ್ಯ ವಿಧಾನಸಭೆ ಅಧಿನಿಯಮವನ್ನೇ ನೀವು ಉಲ್ಲಂಘಿಸಿದ್ದೀರಿ. ರಾಜಕೀಯ ದುರುದ್ದೇಶದಿಂದ ಸ್ಪೀಕರ್ ವಿರುದ್ಧ ಹಕ್ಕುಚ್ಯುತಿ ಮಂಡಿಸುವ ಹೇಳಿಕೆ ನೀಡಿದ್ದೀರಿ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಹಾಗಾಗಿ ನಿಮ್ಮ ವಿರುದ್ಧವೇ ಏಕೆ ಹಕ್ಕುಚ್ಯುತಿ ಮಂಡಿಸಬಾರದು?,'' ಎಂದು ಪ್ರಶ್ನಿಸಿದರು ಎನ್ನಲಾಗಿದೆ.

''ಸಭಾಧ್ಯಕ್ಷರು ಯಾವುದೇ ತನಿಖೆಗೆ ತಡೆ ನೀಡಿಲ್ಲ, ಲಾಕ್‌ಡೌನ್ ಇರುವುದರಿಂದ ಯಾವುದೇ ಸಮಿತಿಯವರು ಸ್ಥಳ ವೀಕ್ಷಣೆಗೆ ಹೋಗಲು ತಾತ್ಕಾಲಿಕವಾಗಿ ಅವಕಾಶವಿಲ್ಲ ಎಂದಷ್ಟೇ ಹೇಳಿದ್ದಾರೆ. ಇಷ್ಟು ಸಣ್ಣ ವಿಚಾರ ಮುಂದಿಟ್ಟುಕೊಂಡು ಸಭಾಧ್ಯಕ್ಷರನ್ನು ಅವಮಾನಿಸಲು ಮುಂದಾಗಿದ್ದೀರಿ. ಈ ಮೂಲಕ ನಮ್ಮ ಸಮಿತಿಗೂ ಕೆಟ್ಟ ಹೆಸರು ತರುತ್ತಿದ್ದೀರಿ,'' ಎಂದು ತೀವ್ರವಾಗಿ ಆಕ್ಷೇಪಿಸಿದರು ಎಂದು ತಿಳಿದುಬಂದಿದೆ.

ಸದಸ್ಯರಿಂದ ಇಷ್ಟೊಂದು ಪ್ರತಿರೋಧ ಬರುತ್ತಿದ್ದಂತೆ ಎಚ್.ಕೆ.ಪಾಟೀಲರು ತಣ್ಣಗಾದರು. ಸಮಿತಿಯಲ್ಲಿರುವ ಕಾಂಗ್ರೆಸ್, ಜೆಡಿಎಸ್ ಸದಸ್ಯರೂ ಅವರ ಬೆಂಬಲಕ್ಕೆ ನಿಲ್ಲಲಿಲ್ಲ. ಇದರಿಂದಾಗಿ ತೀವ್ರ ಮುಖಭಂಗ ಅನುಭವಿಸುವಂತಾಯಿತು ಎಂದು ತಿಳಿದು ಬಂದಿದೆ. ಆಡಳಿತ ಪಕ್ಷದಿಂದ ಸಮಿತಿ ಸದಸ್ಯರಾಗಿರುವ ಮಾಜಿ ಸ್ಪೀಕರ್ ಕೆ.ಜಿ.ಬೋಪಯ್ಯ, ವಿಧಾನಮಂಡಲದ ನಿಯಮಾವಳಿಗಳ ಬಗ್ಗೆ ಬೆಳಕು ಚೆಲ್ಲುತ್ತಲೇ ಪಾಟೀಲರ ನಡೆಯನ್ನು ಖಂಡಿಸಿದರು. ಇದಕ್ಕೆ ಇತರ ಸದಸ್ಯರೂ ದನಿಗೂಡಿಸಿದರು.

ಸಮಿತಿ ಸದಸ್ಯರ ಪೈಕಿ ಕಾಂಗ್ರೆಸ್ ಈಶ್ವರ ಖಂಡ್ರೆ ಮಾತ್ರ ಗೈರು ಹಾಜರಾಗಿದ್ದರು.

### ಅಧ್ಯಕ್ಷರ ಅತಿ ಉತ್ಸಾಹ

**ಕಾಂಗ್ರೆಸ್‌ನ ಹಿರಿಯ ಶಾಸಕರೊಬ್ಬರು, ''ಸ್ಪೀಕರ್ ಅವರಿಗೂ ಅವರದ್ದೇ ಆದ ಅಧಿಕಾರವಿರುತ್ತದೆ. ಅದನ್ನು ನಾವು ಗೌರವಿಸಬೇಕು. ಹಾಗೆಯೇ ಸಮಿತಿಯ ಮಹತ್ವವನ್ನೂ ಕಾಯ್ದುಕೊಳ್ಳಬೇಕು. ಈ ಪ್ರಕರಣದಲ್ಲಿ ಸಮಿತಿ ಅಧ್ಯಕ್ಷರು ಅತಿ ಉತ್ಸಾಹ ತೋರಿದ್ದರಿಂದ ಇಂತಹ ಸನ್ನಿವೇಶ ನಿರ್ಮಾಣವಾಗಿದೆ. ಈ ಸಂಘರ್ಷವನ್ನು ಬಗೆಹರಿಸಿಕೊಳ್ಳಬೇಕು,'' ಎಂಬ ಸಲಹೆ ನೀಡಿದರು. ಅದಕ್ಕೆ ಪಾಟೀಲ್ ತಲೆದೂಗಿದರು ಎನ್ನಲಾಗಿದೆ.**



**● ಕೋವಿಡ್ ಉಪಕರಣ ಖರೀದಿ ಭ್ರಷ್ಟಾಚಾರದ ಹಿನ್ನೆಲೆಯಲ್ಲಿ ಪರಿಶೀಲನೆ ಕೈಗೊಳ್ಳಬೇಕಿತ್ತು. ಅದಕ್ಕೆ ಸ್ಪೀಕರ್ ತಡೆಯೊಡ್ಡಿದ್ದರು. ಈ ವಿಚಾರವಾಗಿ ಸಭೆ ಕರೆದು ಚರ್ಚಿಸಲಾಯಿತು. ಈ ಸಂಬಂಧ ಸ್ಪೀಕರ್ ಭೇಟಿಯಾಗಿ ಸಭೆ ನಡೆಸುವ ಬಗ್ಗೆ ತೀರ್ಮಾನಿಸಲಾಯಿತು. ಸ್ಥಳ ಪರಿಶೀಲನೆಗೆ ಅವಕಾಶ ನೀಡುವಂತೆಯೂ ಸ್ಪೀಕರ್ ಅವರಿಗೆ ಕೇಳಿಕೊಳ್ಳಲಾಗುವುದು.**

**-ಎಚ್.ಕೆ.ಪಾಟೀಲ್** ಪಿಎಸಿ ಅಧ್ಯಕ್ಷ